## ಮಾಂಗಲ್ಯಂ ತಂತುನಾನೇನ ....

ಅಲೆವೂರು ಶ್ರೀಮತಿ ವಿನುತ ಮತ್ತು ಶ್ರೀ ಪ್ರಭಾಕರ ರಾಯರ ಪುತ್ರ **ಗಿರೀಶ ಮತ್ತು** ಮಾರ್ಪಳ್ಳಿ ಶ್ರೀಮತಿ ಸುಶೀಲ ಮತ್ತು ಶ್ರೀ ಗಣೇಶ ಶ್ಯಾನುಭಾಗರಾಯರ ಪುತ್ರಿ **ಶ್ವೇತಾ** ಇವರ ವಿವಾಹವು ತಾ.15-10-2008ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು. ಮರುದಿನ ತಾ.16-10-2008ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ವಿವಾಹ ಸಂತೋಷಾರ್ಥ ಆಪ್ತ ಭೋಜನ ಕೂಟ ಮತ್ತು ಹಂಸಧ್ವನಿ ಬಳಗದವರಿಂದ ನೃತ್ಯ ಗೀತೆಗಳು ಹಾಗೂ ಸಾಂಸ್ಕೃತಿಕ ರಸದೌತಣ ಜರಗಿತು.

□ □ □ □ □

ಅಲೆವೂರು ಶ್ರೀಮತಿ ಸುಮಿತ್ರ ಮತ್ತು ಶ್ರೀ ಶ್ರೀನಿವಾಸ ರಾಯರ ಪುತ್ರ **ಸಂಕೇತ್** ಮತ್ತು ಮಣಿಪಾಲ ಶ್ರೀಮತಿ ಸುಧಾ ಮತ್ತು ಡಾ। ಬಿ. ಎಚ್. ಆನಂದರಾಯರ ಪುತ್ರಿ **ತೇಜಸ್ವಿ** ಇವರ ವಿವಾಹವು ತಾ.02-11-2008ರಂದು ಉಡುಪಿ ಅಂಬಲ್ಪಾಡಿಯ ಶ್ಯಾಮಿಲಿ ಸಭಾಭವನದಲ್ಲಿ ಜರಗಿತು.

□ □ □ □ □

ದಿ। ಅನಂತಕೃಷ್ಣ ರಾಯರ ಪುತ್ರ **ಜಗನ್ನಿವಾಸ** ಮತ್ತು ಕುಕ್ಕಿಕಟ್ಟೆ ಕಲ್ಯಾಣನಗರ ಶ್ರೀಮತಿ ಮತ್ತು ಶ್ರೀ ಎಂ.ಕೆ. ಕೃಷ್ಣಯ್ಯನವರ ಪುತ್ರಿ **ರಾಜೇಶ್ವರಿ** ಇವರ ವಿವಾಹವು ತಾ.05-11-2008ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ಜರಗಿತು.

□ □ □ □ □

ನಿಟ್ಟೆ ಕೆಮ್ಮಣ್ಣು ಪಡುಮನೆ ಶ್ರೀಮತಿ ಪದ್ಮಿನಿ ಮತ್ತು ಶ್ರೀ ಕೆ. ಅನಿಲ್ ಕುಮಾರ್ ಇವರ ಪುತ್ರ **ದೀಪಕ್ ಕುಮಾರ್** ಮತ್ತು ಉಡುಪಿಯ ಕುಂಜಿಬೆಟ್ಟು ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ವೈ. ಮುರಳೀಧರ ರಾವ್ ಇವರ ಪುತ್ರಿ **ಪ್ರೀತಿ** ಇವರ ವಿವಾಹವು ತಾ.06-11-2008 ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು.

□ □ □ □ □

ಹೆಬ್ರಿಯಲ್ಲಿರುವ ಶ್ರೀಮತಿ ಮತ್ತು ಶ್ರೀ ವಿಶ್ವನಾಥ ರಾವ್ ಎಲ್ಲೂರು ಇವರ ಸುಪುತ್ರ **ವಿಕಾಸ** ಮತ್ತು ಶ್ರೀಮತಿ ಮತ್ತು ಶ್ರೀ ಎಂ.ಕೆ. ಪುರುಷೋತ್ತಮ ಕೋಗಿಲೆ ಇವರ ಸುಪುತ್ರಿ **ಶುಭ** ಇವರ ವಿವಾಹವು ತಾ.13-10-2008ರಂದು ಹೆಬ್ರಿ ಶ್ರೀ ಅನಂತ ಪದ್ಮನಾಭ ದೇವರ ಸನ್ನಿಧಿಯಲ್ಲಿ ಜರಗಿತು.

### ವೃಶ್ಚಿಕ ಮಾಸದ ವಿಶೇಷ ದಿನಗಳು

| | |
|---|---|
| 15-11-2008 | **ವೃಶ್ಚಿಕ ಸಂಕ್ರಮಣ** |
| 16-11-2008 | **ಸಂಕಷ್ಟ ಚತುರ್ಥೀ** |
| | ಚಂದ್ರೋದಯ ರಾತ್ರಿ ಗಂ.9.17ಕ್ಕೆ |
| 19-11-2008 | **ಅನುರಾಧ ನಕ್ಷತ್ರಾರಂಭ** |
| 23-11-2008 | **ಸರ್ವೈಕಾದಶೀ** |
| 24-11-2008 | **ಪ್ರದೋಷಃ** |
| 27-11-2008 | **ಅಮಾವಾಸ್ಯಾ** |
| 02-12-2008 | **ಜೇಷ್ಠಾ ನಕ್ಷತ್ರಾರಂಭ** |
| 04-12-2008 | **ಶ್ರೀ ಸುಬ್ರಹ್ಮಣ್ಯ ಷಷ್ಠಿ** |
| 09-12-2008 | **ಸರ್ವೈಕಾದಶೀ** |
| 10-12-2008 | **ಪ್ರದೋಷಃ** |
| 12-12-2008 | **ಪೂರ್ಣಿಮಾ** |
| 15-12-2008 | **ಧನು ಸಂಕ್ರಮಣ** |
| | **ಸಂಕಷ್ಟ ಚತುರ್ಥೀ** |
| | ಚಂದ್ರೋದಯ ರಾತ್ರಿ ಗಂ.9.07ಕ್ಕೆ |
| | **ಮೂಲಾನಕತ್ರಾರಂಭ** |

# ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಶ್ರೀ ವೇಣುಗೋಪಾಲ್‌ರಾವ್



ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಜತೆ ಕಾರ್ಯದರ್ಶಿ ಶ್ರೀ ವೇಣು ಗೋಪಾಲರಾವ್ ಇವರು ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಸಹಕರಿಸಿದ್ದಾರೆ.

ಉಡುಪಿ ಅಂಬಲಪಾಡಿಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಯುತ ವೇಣುಗೋಪಾಲ ರಾಯರು ಮೂಲತಃ ಬೈಲೂರು ಕರ್ವಾಲಿನವರು. ತಮ್ಮ ವಿದ್ಯಾಭ್ಯಾಸದ ನಂತರ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸೇವೆಗೆ ಸೇರಿ ಉಡುಪಿಯ ಆಸುಪಾಸಿನಲ್ಲಿ ಮಾತ್ರವಲ್ಲದೆ ಶೃಂಗೇರಿ, ಹಾಸನ ಮೊದಲಾದ ಶಾಖೆಗಳಲ್ಲಿ ಕರ್ತವ್ಯದಲ್ಲಿದ್ದರು. ಅಲ್ಲದೆ ಸಿಂಡಿಕೇಟ್ ಬ್ಯಾಂಕ್‌ನ ಮಣಿಪಾಲ ಕೇಂದ್ರ ಕಛೇರಿಯಲ್ಲಿ ಪಬ್ಲಿಕ್ ರಿಲೇಷನ್ ಆಫಿಸರ್ ಆಗಿ ಖ್ಯಾತಿ ಪಡೆದವರು.

ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದು ಕರ್ವಾಲು ಹಾಗೂ ಉಡುಪಿಯಲ್ಲಿ ಅನೇಕ ಸಂಘ ಸಂಸ್ಥೆಗಳಲ್ಲಿ ಕ್ರಿಯಾಶೀಲ ಸದಸ್ಯರು ಹಾಗೂ ಪದಾಧಿಕಾರಿಗಳಾಗಿ ಮಿಂಚಿದ್ದಾರೆ. ಕರ್ವಾಲು ಯುವಕ ಮಂಡಲ, ದೇವಸ್ಥಾನದ ಜೀರ್ಣೋದಾರದ ಸಮಿತಿ, ಉಡುಪಿಯ ಆರ್ಟಿಸ್ಟ್ ಫೋರಂ, ಅಂಬಲಪಾಡಿಯ ಯುವಕ ಮಂಡಲ ಮೊದಲಾದವುಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

ಭಾರತೀಯ ಜೂನಿಯರ್ ಛೇಂಬರ್‌ನಲ್ಲಿ ಉಡುಪಿ ಟೆಂಪಲ್ ಸಿಟಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ಆಗಿನ ರಾಜ್ಯ ವ್ಯವಸ್ಥೆಯಲ್ಲಿ ರಾಜ್ಯ ಉಪಾಧ್ಯಕ್ಷರಾಗಿ ಜೇಸೀ ಸಂಸ್ಥೆಯನ್ನು ನಡೆಸಿದ್ದಾರೆ. ಉತ್ತಮ ಜೇಸೀ ತರಬೇತಿದಾರರೆಂಬ ಖ್ಯಾತಿಯ ಇವರು ಅನೇಕ ಜೇಸೀ ಸಮ್ಮೇಳನಗಳನ್ನು ಯಶಸ್ವಿಯಾಗಿ ಸಂಘಟಿಸಿದ ಕೀರ್ತಿ ಇವರ ಪಾಲಿಗೆ ಇಂದಿಗೂ ಇದೆ.

ಮಣಿಪಾಲದ ಜಯಂಟ್ಸ್ ಇಂಟರ್‌ನೇಶನಲ್ ಸ್ಥಾಪಕ ಅಧ್ಯಕ್ಷರಾಗಿ ಇಂದಿಗೂ ಜಯಂಟ್ಸ್ ಸಂಸ್ಥೆಯ ಬೆನ್ನೆಲುಬಾಗಿ ದುಡಿಯುತ್ತಿದ್ದಾರೆ.

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಯುವ ವಿಭಾಗದ ಸದಸ್ಯರಾಗಿ, ಕಾರ್ಯದರ್ಶಿಗಳಾಗಿ, ಅಧ್ಯಕ್ಷರಾಗಿ ಯುವ ವಿಭಾಗದ ಅನೇಕ ಕಾರ್ಯಕ್ರಮಗಳನ್ನು ಸಂಘಟಿಸಿದ ಕೀರ್ತಿ ಇವರ ಪಾಲಿಗೆ ಇದೆ. ಉಡುಪಿಯಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿದ್ದು, ಕೋಶಾಧಿಕಾರಿಗಳಾಗಿಯೂ ಕೆಲಸ ನಿರ್ವಹಿಸಿರುತ್ತಾರೆ. 1999ರಲ್ಲಿ ಶ್ರೀಶಾರದಾ ಪತ್ರಿಕೆಯನ್ನು ಪ್ರಾರಂಭಿಸಬೇಕೆಂದು ಯುವ ವಿಭಾಗ ನಿಶ್ಚಯಿಸಿದಾಗ ಪತ್ರಿಕೆಯ ಸಂಪಾದಕರಾಗಿ ಸುಮಾರು 7 ವರ್ಷಗಳ ಕಾಲ ಪತ್ರಿಕೆಯನ್ನು ಮುನ್ನಡೆಸಿದ್ದಾರೆ. ಸಂಘ ಸಂಸ್ಥೆಗಳಲ್ಲಿರುವಾಗ ಅನೇಕ ಸ್ಮರಣ ಸಂಚಿಕೆಗಳ ಸಂಪಾದಕತ್ವವನ್ನು ಮಾಡಿ ಅನುಭವ ಹೊಂದಿರುವ ಶ್ರೀಯುತರು ತಮ್ಮ ಬರವಣಿಗೆ ಶೈಲಿಯಿಂದ ಓದುಗರನ್ನು ಮನಮುಟ್ಟುವಂತೆ ವಿಷಯಗಳನ್ನು ಪ್ರಸ್ತುತ ಪಡಿಸುವ ಕಲೆಯನ್ನು ತಮ್ಮಲ್ಲಿ ಬೆಳೆಸಿಕೊಂಡಿದ್ದಾರೆ. ಈಗಲೂ ಶ್ರೀಶಾರದಾ ಪತ್ರಿಕೆಯ ಸಲಹೆಗಾರರಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಶ್ರೀಶಾರದಾ ಪತ್ರಿಕೆಗೆ ಚಂದಾ ಸಂಗ್ರಹ ಕಾರ್ಯಕ್ಕೆ ಸಮಾಜದ ಮನೆ ಮನೆಗೆ ತೆರಳುವ ಯುವ ವಿಭಾಗದ ಸದಸ್ಯರ ಮುಂದಾಳುತನವನ್ನು ನಿರ್ವಹಿಸಿ ಅವರವರ ದ್ವಿಚಕ್ರ ವಾಹನಗಳಲ್ಲಿ ಉಡುಪಿ ತಾಲೂಕಿನಾದ್ಯಂತ ಸಂಚರಿಸಿದ ಕೀರ್ತಿವಂತರು.

ಉಡುಪಿಯ ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಇದರ ಸ್ಥಾಪನೆಗಾಗಿ ಪಾಲು ಬಂಡವಾಳ ಸಂಗ್ರಹಿಸುವಲ್ಲಿಯೂ ಉಳಿದ ಪ್ರವರ್ತಕರ ಜೊತೆಗೂಡಿ ಸಮಾಜ ಬಾಂಧವರ ಮನೆ ಮನೆಗೆ ತೆರಳಿ ನಮ್ಮದೇ ಒಂದು ಬ್ಯಾಂಕ್ ಸ್ಥಾಪನೆಗೆ ಕಾರಣರಾಗಿದ್ದಾರೆ.

ಸಿಂಡಿಕೇಟ್ ಬ್ಯಾಂಕಿನಿಂದ ಸೇವಾ ನಿವೃತ್ತಿ ಪಡೆದ ಬಳಿಕ ಶ್ರೀಶಾರದಾ ಕೋ-ಆಪರೇಟಿವ್ ಸೊಸೈಟಿಯಲ್ಲಿ ಪ್ರಬಂಧಕರಾಗಿ ಕೆಲಸ ಮಾಡಿ ಸೊಸೈಟಿಯು ಲಾಭಾಂಶಗಳಿಸುವಲ್ಲಿ ಇವರ ಸಾಧನೆ-ಜಾಣ್ಮೆ ಮೆಚ್ಚತಕ್ಕದ್ದು.

ಶ್ರೀ ವೇಣುಗೋಪಾಲರಾಯರ ಧರ್ಮಪತ್ನಿ ಶ್ರೀಮತಿಯವರು ಮಣಿಪಾಲ್ ಕೋ-ಆಪರೇಟಿವ್ ಸೊಸೈಟಿ ನಿ.,ದಲ್ಲಿ ಉದ್ಯೋಗದಲ್ಲಿದ್ದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಸದಸ್ಯೆಯಾಗಿ ಮತ್ತು ಮಹಿಳಾ ವಿಭಾಗದ ಅಧ್ಯಕ್ಷೆಯಾಗಿ ಮುನ್ನಡೆಸಿದವರು.

ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಶ್ರೀ ವೇಣುಗೋಪಾಲ್‌ರಾವ್ ಹಾಗೂ ಶ್ರೀಮತಿ ವೇಣುಗೋಪಾಲ್‌ರಾವ್ ದಂಪತಿಗಳಿಗೆ ಶ್ರೀಶಾರದಾ ಬಳಗವು ಅನಂತ ಕೃತಜ್ಞತೆ ಸಲ್ಲಿಸುತ್ತಾ ಅವರಿಗೆ ಅವರ ಕುಟುಂಬಕ್ಕೆ ಶ್ರೀಶಾರದಾ ಮಾತೆಯು ಇನ್ನೂ ಹೆಚ್ಚಿನ ಶ್ರೇಯಸ್ಸನ್ನುಂಟು ಮಾಡಲಿ ಎಂದು ಶ್ರೀಶಾರದಾ ಪತ್ರಿಕೆಯು ಹಾರೈಸುತ್ತದೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಉತ್ತರಿಸಿದವರು : ಡಾ। ವೈ. ಸುದರ್ಶನ್ ರಾವ್**

**ಪ್ರಶ್ನೆ : ನಾನು ಒಬ್ಬ ಸಿಹಿ ಮೂತ್ರ ರೋಗಿ. ನನಗೆ ಮೂತ್ರದಲ್ಲಿ 'ಪ್ರೋಟೀನ್' ಹೋಗುತ್ತಿದೆ ಎಂದು ವೈದ್ಯರು ಹೇಳುತ್ತಿದ್ದಾರೆ. ಇದರ ಅರ್ಥವೇನು?**

ಉತ್ತರ : ಪ್ರತಿಯೊಬ್ಬರ ಮೂತ್ರದಲ್ಲೂ ಪ್ರೋಟೀನ್‌ನ ಅಂಶ ಇದ್ದೇ ಇರುತ್ತದೆ. 24 ಗಂಟೆಗಳಲ್ಲಿ ರೋಗಿ ವಿಸರ್ಜಿಸಿದ ಮೂತ್ರದಲ್ಲಿ 150 ಮಿಲಿಗ್ರಾಂಗಳಿಗಿಂತ ಹೆಚ್ಚು ಪ್ರೋಟೀನ್ ಇದ್ದಲ್ಲಿ ಆಗ ಅದನ್ನು 'ಪ್ರೋಟೀನೂರಿಯಾ' (proteinuria) ಎಂದು ಕರೆಯುವರು. ಸಾಮಾನ್ಯವಾಗಿ ಪ್ರೋಟೀನೂರಿಯಾಗೆ ಬಹಳಷ್ಟು ಕಾರಣಗಳಿದ್ದರೂ ಸಿಹಿಮೂತ್ರ ಹಾಗೂ ರಕ್ತದೊತ್ತಡ ಅಧಿಕವಿರುವ ರೋಗಿಗಳಲ್ಲಿ ಇದು ಕಿಡ್ನಿ ವೈಫಲ್ಯದ ಆರಂಭಿಕ ಚಿಹ್ನೆಯಾಗಿರಬಹುದು. ತಾವು ಖಂಡಿತವಾಗಿಯೂ ತಜ್ಞ ವೈದ್ಯ (ಸಿಹಿ ಮೂತ್ರ ಹಾಗೂ ಕಿಡ್ನಿ)ರ ಸಲಹೆ ಪಡೆದು ಸಿಹಿಮೂತ್ರವನ್ನು ಸಂಪೂರ್ಣ ನಿಯಂತ್ರಣದಲ್ಲಿಡಬೇಕು. ಇನ್‌ಸುಲಿನ್‌ನ ಉಪಯೋಗ ಅತ್ಯುತ್ತಮ. ರಕ್ತದಲ್ಲಿ 'ಯೂರಿಯಾ' (ಆರೋಗ್ಯವಂತರಲ್ಲಿ 40ಮಿಲಿ ಗ್ರಾಂ ಗಿಂತ ಕಡಿಮೆ ಇರಬೇಕು) ಹಾಗೂ 'ಕ್ರಿಯಾಟಿನಿನ್' (1.6 ಮಿಲಿಗ್ರಾಂಗಿಂತ ಕಡಿಮೆ ಇರಬೇಕು) ಎಂಬ ಪರೀಕ್ಷೆಗಳನ್ನು ನಿಯಮಿತವಾಗಿ ಮಾಡಿಸುತ್ತಿದ್ದಲ್ಲಿ ಕಿಡ್ನಿ ಹೇಗೆ ಕೆಲಸ ಮಾಡುತ್ತಿದೆ ಎಂದು ತಿಳಿಯುವುದು.

ಸಿಹಿಮೂತ್ರ ಹಾಗೂ ರಕ್ತದೊತ್ತಡ ಅಧಿಕವಿರುವ ರೋಗಿಗಳು ಮೂತ್ರದಲ್ಲಿ 'ಮೈಕ್ರೋಪ್ರೋಟೀನೂರಿಯಾ' (microproteinuria) ಎಂಬ ಇನ್ನೊಂದು ಪರೀಕ್ಷೆ ಮಾಡಿಸಿಕೊಳ್ಳಬಹುದು. (ಆರೋಗ್ಯವಂತರಲ್ಲಿ 30 ಮಿಲಿಗ್ರಾಂಗಿಂತ ಕಡಿಮೆ ಇರಬೇಕು). ಈ ಪರೀಕ್ಷೆಯಿಂದ ಐದು ವರ್ಷಗಳ ನಂತರ ಬರಬಹುದಾದ ಕಿಡ್ನಿ ವೈಫಲ್ಯವನ್ನು ಮೊದಲೇ ಪತ್ತೆ ಹಚ್ಚಿ ನಿವಾರಿಸಿಕೊಳ್ಳಬಹುದು. ಕನಿಷ್ಟ ವರ್ಷಕ್ಕೊಮ್ಮೆಯಾದರೂ ಈ ಪರೀಕ್ಷೆ ಮಾಡಿಸಿಕೊಂಡರೆ ಉತ್ತಮ.

## ವಿಳಾಸ ಬದಲಾವಣೆ

- **ಬಿ. ಹರೀಶ್ಚಂದ್ರರಾವ್**, ಜಲ್ಲನ್‌ನಗರ, ಎಚ್.7, ಬಾಲಾಜಿ ಕಟ್ಟಡ, ಪೈಂಟನ್ ರಸ್ತೆ, ರೈಲ್ವೇ ಸ್ಟೇಶನ್ ಬಳಿ, ಔರಂಗಾಬಾದ್, ಮಹಾರಾಷ್ಟ್ರ
- **ಸಂತೋಷ ರಾವ್**, 'ಸ್ಫೂರ್ತಿ', 5-70ಎ, 2ನೇ ಅಡ್ಡರಸ್ತೆ, ರುದ್ರಪ್ರಿಯ ನಗರ, ಇಂದ್ರಾಳಿ, ಉಡುಪಿ-576 102.
- **ಐ.ಪಿ. ನಾಗರಾಜ ರಾವ್**, 'ಶ್ರೀ ರಾಮನಾಥ' ಮನೆ, 4ನೇ ಮುಖ್ಯ ರಸ್ತೆ, ವಿಭುದಪ್ರಿಯ ನಗರ, ಕುಂಜಿಬೆಟ್ಟು, ಅಂಚೆ : ಕುಂಜಿಬೆಟ್ಟು, ಉಡುಪಿ – 576 102. ದೂರವಾಣಿ ಸಂಖ್ಯೆ : 2574806

## ಚಿರಸ್ಮರಣೆ



**ಜನನ : 04-02-1946** **ನಿಧನ : 20-12-2007**

**ಶ್ರೀಮತಿ ಕುಸುಮ ಜಿ. ರಾವ್**

ನಿಮ್ಮನ್ನಗಲಿ ಒಂದು ವರ್ಷವಾದರೂ ಸದಾ ನಿಮ್ಮನ್ನೇ ನೆನಪಿಸುತ್ತಾ
ತಾ.07-01-2009ರಂದು ವಾರ್ಷಿಕ ಪುಣ್ಯತಿಥಿಯನ್ನು ಆಚರಿಸುತ್ತಿರುವ ಸಂದರ್ಭದಲ್ಲಿ
ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ,

**- ವೈ. ಗೋವಿಂದರಾವ್ (ಪತಿ) ಮತ್ತು ಮಕ್ಕಳು**

### ಸಾಮೂಹಿಕ ಗಣಹೋಮ

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.16-11-2008ರಂದು ಮತು 15-12-2008ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ
**ಡಿಸೆಂಬರ್ ತಿಂಗಳಲ್ಲಿ**
**ತಾ.13-12-2008ರ ಶನಿವಾರ**
ಸಂಜೆ ಗಂಟೆ 5-30ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನ'ಕಾರ **ಶ್ರೀ ಬಾರ್ಕೂರು ನಾಗೇಶರಾವ್.**

ಸರ್ವರಿಗೂ ಆದರದ ಸ್ವಾಗತ

**- ಶ್ರೀಶಾರದಾ ದೇವಸ್ಥಾನ ವೇದಿಕೆ**